

## ಬ್ಲೂ ವೇಲ್

ಭೂಮಿ ಮೇಲಿನ ಅತಿ ದೊಡ್ಡ ಸ್ತನಿ ನೀಲಿ ತಿಮಿಂಗಿಲದ (ಬ್ಲೂ ವೇಲ್) ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ತಗ್ಗುತ್ತಿದೆ. ಸಾಮಾನ್ಯವಾಗಿ 100 ಅಡಿ ಉದ್ದ, 200 ಕೆ.ಜಿ. ತೂಕದ ಈ ತಿಮಿಂಗಿಲದಿಂದ ಆರೋಗ್ಯಕರ ಸಮುದ್ರ ಪರಿಸರಕ್ಕೆ ಕೊಡುಗೆ ಅಪಾರ. ದುರದೃಷ್ಟವೆಂದರೆ, ವಾಣಿಜ್ಯಿಕ ಉದ್ದೇಶಕ್ಕೆ ಇವುಗಳ ಅವ್ಯಾಹತ ಬೇಟೆ ನಡೆಯುತ್ತಿದೆ. 1966ರಲ್ಲಿ ಈ ತಿಮಿಂಗಿಲದ ಬೇಟೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ನಿಷೇಧಿಸಿದ್ದರೂ ಇದುವರೆಗೂ ಬೇಟೆ ನಿಂತಿಲ್ಲ. 2016ರ ಐಯುಸಿಎನ್ ವರದಿ ಪ್ರಕಾರ, ಇವುಗಳ ಜಾಗತಿಕ ಸಂಖ್ಯೆ ಕೇವಲ 10–25 ಸಾವಿರ.

## ಸ್ಟೆಲ್ಲರ್ ಸೀ ಲಯನ್



ಸ್ಟೆಲ್ಲರ್ ಸೀ ಲಯನ್, ದೊಡ್ಡ ಮಟ್ಟದಲ್ಲಿ ಕ್ಷೀಣಿಸುತ್ತಿರುವ ಸಮುದ್ರಜೀವಿ. ಕಿವಿಯಿರುವ ಇದನ್ನು 'ನಾರ್ದರ್ನ್ ಸೀ ಲಯನ್' ಎಂದೂ ಕರೆಯುತ್ತಾರೆ. ತಿಮಿಂಗಿಲಗಳಿಂದ, ಮೀನುಗಾರಿಕೆ ಬಲೆಗಳಿಂದ ತಪ್ಪಿಸಿಕೊಂಡು ಬದುಕುಳಿಯುವುದೇ ಇವುಗಳಿಗೆ ದೊಡ್ಡ ಸಾಹಸ.

ಈ ಸ್ಟೆಲ್ಲರ್ ಸೀ ಲಯನ್‌ಗಳನ್ನು ಮಾಂಸಕ್ಕಾಗಿ ಕೊಲ್ಲುತ್ತಿರುವುದು ಇವುಗಳ ಸಂತತಿ ಅಳಿವಿಗೆ ಸರಿಯಲು ಬಹುಮುಖ್ಯ ಕಾರಣವಾಗಿದೆ. 1960ರಿಂದ ಮನುಷ್ಯ ಚಟುವಟಿಕೆಗಳು ಹಾಗೂ ಪ್ರಾಕೃತಿಕ ಕಾರಣಗಳಿಂದಾಗಿ ಇವುಗಳ ಸಂಖ್ಯೆಯಲ್ಲಿ ಶೇ.60ರಷ್ಟು ಕುಸಿತವಾಗಿದೆ.

## ಫಿನ್ ವೇಲ್

ಬ್ಲೂ ವೇಲ್ ನಂತರದ ಅತಿ ದೊಡ್ಡ ಸ್ತನಿ ಎಂದು ಕರೆಸಿಕೊಂಡಿದೆ ಫಿನ್ ವೇಲ್. ಸಾಮಾನ್ಯವಾಗಿ 25.9 ಮೀಟರ್ ಉದ್ದ, 114 ಟನ್ ತೂಕ ಹೊಂದಿರುವ ಈ ತಿಮಿಂಗಿಲ ಕೂಡ ಮಾನವನ ಬೇಟೆಗೆ ಅತಿ ದೊಡ್ಡ ಸಂಖ್ಯೆಯಲ್ಲಿ ಬಲಿಯಾಗುತ್ತಿರುವ ಮತ್ತೊಂದು ಕಡಲಜೀವಿ. ಜಾಗತಿಕವಾಗಿ ಇದರ ಸಂಖ್ಯೆ 1,00,000ರಿಂದ 1,19,000ವರೆಗಿದೆ.





## ಹ್ಯಾಮರ್ಡ್ ಶಾರ್ಕ್

ತಲೆ ಸುತ್ತಿಗೆಯಂತೆ ಇರುವುದರಿಂದ ಇದಕ್ಕೆ 'ಹ್ಯಾಮರ್ಡ್ ಶಾರ್ಕ್' ಎಂಬ ಹೆಸರು. ಈ ಭಿನ್ನಾಕೃತಿಯೇ ಇದರ ಆಕರ್ಷಕ ಅಂಶ ಕೂಡ. ಅತಿ ಕ್ರೂರ ಬೇಟೆಗಾರ ಎಂದು ಕರೆಸಿಕೊಳ್ಳುವ ಈ ಶಾರ್ಕ್, ಮನುಷ್ಯರ ಮೇಲೆ ದಾಳಿ ಮಾಡಿದ ಪ್ರಸಂಗಗಳು ಸಾಕಷ್ಟಿವೆ. ಇವುಗಳ ರೆಕ್ಕೆಗಳಿಗೆ ಬಲುಬೇಡಿಕೆ. ಅವು ಉಸಿರಾಡುವಾಗಲೇ ರೆಕ್ಕೆಗಳನ್ನು ಕಿತ್ತು ದೇಹವನ್ನು ನೀರಿಗೆ ಎಸೆಯುವ ವಿಚಿತ್ರ ಬೇಟೆಯ ಕಾರಣ ಇವುಗಳ ಸಂತತಿ ಕ್ಷೀಣಿಸುತ್ತಿದೆ.

## ಹೆಕ್ಟಾರ್ಸ್ ಡಾಲ್ಫಿನ್

ನ್ಯೂಜಿಲೆಂಡ್‌ನ ಕಡಲತೀರಗಳಲ್ಲಿ ಹೆಚ್ಚಾಗಿ ಕಂಡುಬರುವ ಈ ಡಾಲ್ಫಿನ್, ಪ್ರಪಂಚದಲ್ಲೇ ಅತಿ ಸಣ್ಣ ಡಾಲ್ಫಿನ್. ಪುಟ್ಟ ದೇಹರಚನೆ, ಅಪ್ಪಟ ಬಿಳಿ ಕಂಠ, ಡೊಳ್ಳು ಹೊಟ್ಟೆ, ಈ ಡಾಲ್ಫಿನ್ ಅನ್ನು ಸುಂದರವಾಗಿ ಕಾಣುವಂತೆ ಮಾಡಿವೆ. ಗುಂಪಿನಲ್ಲಿ ವಾಸಿಸುವ ಇವುಗಳ ಸಂಖ್ಯೆ ಕ್ಷೀಣಿಸಲು, ಮೀನುಗಾರಿಕೆಗೆ ಬಳಸುವ ಗಿಲ್‌ನೆಟ್‌ಗಳೇ ಕಾರಣ. ಬಲೆಗಳಿಗೆ ಸಿಲುಕಿ ಈ ಡಾಲ್ಫಿನ್‌ಗಳು ಅಸುನೀಗುವ ವರದಿಗಳು ನಿರಂತರವಾಗಿವೆ.



## ಹವಾಯಿಯನ್ ಮಾಂಕ್ ಸೀಲ್



ಹವಾಯಿ ದ್ವೀಪಗಳ ಈಶಾನ್ಯ ಭಾಗದಲ್ಲಿ ಕಂಡುಬರುವ, ಕಿವಿಯಿಲ್ಲದ ಈ ಸೀಲ್ ಪ್ರಭೇದ ಕೆಲವೇ ಸಂಖ್ಯೆಗಳಲ್ಲಿ ಉಳಿದುಕೊಂಡಿದೆ. ಮೆಡಿಟರೇನಿಯನ್ ಮಾಂಕ್ ಸೀಲ್, ಮಾಂಕ್ ಸೀಲ್ ಪ್ರಭೇದಗಳು ನಿಧಾನಕ್ಕೆ ಅಳಿವಿಗೆ ಸರಿಯುತ್ತಿವೆ. ಈ ಪ್ರಭೇದದ ಕೆರಿಬಿಯನ್ ಮಾಂಕ್ ಸೀಲ್ ಈಗಾಗಲೇ ಕಣ್ಮರೆಯಾಗಿದೆ. ಈಚಿನ ಸಂಶೋಧನೆಯೊಂದರ ಪ್ರಕಾರ, ದ್ವೀಪಗಳಲ್ಲಿ ಹವಾಯಿಯನ್ ಮಾಂಕ್ ಸೀಲ್‌ಗಳ ಸಂಖ್ಯೆ 1400ರಷ್ಟು ಮಾತ್ರ ಇದೆ. ಇವುಗಳ ಚರ್ಮಕ್ಕಾಗಿ ಬೇಟೆ ನಡೆಯುತ್ತದೆ.

ಚಿತ್ರಗಳು: ವಿಕಿ ಕಾಮನ್ಸ್

ಮಾಹಿತಿ ಮೂಲ: ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್